ಈ ಸಂದರ್ಭದಲ್ಲಿಯೇ. ದೂರದಲ್ಲಿ ಮರಗಳ ಮರೆಯಲ್ಲಿ ಪ್ರೇಮ್, ಅವನ ಸ್ನೇಹಿತ ಸರ್ವೇಶ್ವರ್ ಡ್ರಗ್ಸ್ ಇಂಜೆಕ್ಷನ್ ತೆಗೆದುಕೊಳ್ಳುತ್ತಿದ್ದಾಗ ಅವಳ ಕಿರುಚಾಟ ಕೇಳಿಸಿತು. ಹೆಣ್ಣಿನ ಧ್ವನಿ ಕೇಳಿದ ತಕ್ಷಣ ಪ್ರೇಮ್ ಎದ್ದು ನಿಲ್ಲಲು ಪ್ರಯತ್ನಿಸಿದನು. ಡ್ರಗ್ಸ್‌ನ ಅಮಲು ದೇಹಕ್ಕೆ ಸಹಕಾರ ಕೊಡಲಿಲ್ಲ. ಶಕ್ತಿಯನ್ನೆಲ್ಲ ಕೂಡಿಸಿಕೊಂಡು ಎದ್ದು ತೂರಾಡುತ್ತಾ ಹೋಗಿ ನೋಡಿದರೆ ಸ್ವಿಮ್ಮಿಂಗ್ ಪೂಲ್‌ನಲ್ಲಿದ್ದ ಒಬ್ಬ ಹುಡುಗಿ 'ಹೆಲ್ಪ್ ಹೆಲ್ಪ್' ಎಂದು ಕೂಗುತ್ತಿದ್ದಳು. ಹುಡುಗಿಯನ್ನು ಕಂಡ ತಕ್ಷಣ ಮತ್ತು ಇಳಿದು ಹೋಯಿತು. ನೀರಿನಲ್ಲಿ ಧುಮುಕಿ ಅವಳನ್ನು ಎರಡು ಕೈಗಳಿಂದ ಮೇಲೆತ್ತಿ ಹಿಡಿದನು.

ಆದರೆ ಕೂಡಲೆ ಹೊರಗೆ ಕರೆತರಲಿಲ್ಲ. ಭಾರ ಎತ್ತುವುದಕ್ಕೆ ಕಷ್ಟಪಡುತ್ತಿರುವಂತೆ ಎತ್ತಿ, ನಿಧಾನವಾಗಿ ನಡೆಯುತ್ತ, ಹೇಳಬಾರದ ಅಂಗಗಳನ್ನು ಒತ್ತುತ್ತ ದಡಕ್ಕೆ ಕರೆತಂದನು. ಈ ವಿಷಯವನ್ನು ಗಮನಿಸಿದಳು. ಆದರೆ ಅದು ಮಾಮೂಲಾಗಿ ನಡೆಯಿತೋ, ಬೇಕೆಂದೇ ಹಾಗೆ ಮಾಡಿದನೋ ತಿಳಿಯಲಿಲ್ಲ.

ದಡದ ಮೇಲೆ ಬಂದು ಅವಳನ್ನು ಕೆಳಗೆ ನಿಲ್ಲಿಸಿದಾಗ 'ಥ್ಯಾಂಕ್ಸ್' ಎಂದಳು. ಅವನು ಮಾತನಾಡಲಿಲ್ಲ. ಅವಳ ತಲೆಗೂದಲ ತುದಿಗಳಿಂದ ನೀರು ಹನಿಹನಿಯಾಗಿ ಬೀಳುತ್ತಿತ್ತು. ಅವಳ ದೇಹ ಸ್ಪರ್ಶದ ಸುಖಾನುಭಾವದಿಂದ ಅವನನಿನ್ನೂ ಚೇತರಿಸಿಕೊಂಡಿರಲಿಲ್ಲ. ಸೊಂಟ, ಕಾಲುಗಳು, ತೊಡೆಗಳು, ಕುತ್ತಿಗೆಯ ಸುತ್ತ ಹಾಕಿದ್ದ ಕೈಗಳು, ಅವನ ಎದೆಗೆ ಒತ್ತಿಕೊಂಡ ಅವಳ ಸ್ತನದ್ವಯ...ಅವನಿಗೆ ಡ್ರಗ್ಸ್‌ಗಿಂತ ದೊಡ್ಡ ಮತ್ತು ಎನಿಸಿತು. ಒದ್ದೆ ಬಟ್ಟೆಗಳಲ್ಲಿದ್ದ ಅವಳ ಶರೀರ ದೃಷ್ಟಿಯನ್ನು ಬೇರೆಡೆ ತಿರುಗಿಸಲು ಬಿಡಲಿಲ್ಲ. ಸೀರೆ ಅಂಟಿಕೊಂಡಿದ್ದರಿಂದ ಅವಳ ಬೆನ್ನಡಿಯ ಭಾಗವನ್ನು ಅವನು ರೆಪ್ಪೆ ಬಡಿಯದೆ ನೋಡುತ್ತ ನಾಲಿಗೆಯಿಂದ ತುಟಿ ಸವರಿಕೊಂಡನು.

ಕಲ್ಯಾಣಿ ಗಂಡನ ಕಡೆ ತಿರುಗಿ ಕೋಪದಿಂದ 'ನಿನಗೇನಾದರೂ ಬುದ್ಧಿ ಇದೆಯಾ? ಹೊಸದಾಗಿ ಮದುವೆಯಾದ ಹುಡುಗಿ ಜೊತೆ ಹೀಗೆ ಬಿಹೇವ್ ಮಾಡ್ತೀಯಾ?' ಎಂದಳು.

ಊಹಿಸದಿದ್ದ ಘಟನೆಗೆ ಬೆದರಿದ ಕೃಷ್ಣ 'ನೀರು ಕಂಡರೆ ಭಯ ಅಂದೆಯಲ್ಲ.... ಅದಕ್ಕೇ ಸ್ವಲ್ಪ ತಳ್ಳಿದೆ' ಎಂದು ಸಮರ್ಥಿಸಿಕೊಳ್ಳಲಿಕ್ಕೆ ನೋಡಿದನು.

'ಸ್ವಲ್ಪ ತಳ್ಳಿದೆಯಾ? ಎತ್ತಿ ನೀರಿಗೆ ಎಸೆದು ಬಿಟ್ಟೆ. ಅಷ್ಟಲ್ಲದೆ ಹೆಂಡತಿ ನೀರಿನಲ್ಲಿ ಬಿದ್ದು ಒದ್ದಾಡುತ್ತಿದ್ದರೆ ನೋಡುತ್ತ ನಿಂತಿದ್ದೆ' ಎಂದಳು.

'ನಿನಗೆ ನೀರು ಅಂದರೆ ಫೋಬಿಯಾ, ಅದನ್ನು ಹೋಗಲಾಡಿಸುವುದಕ್ಕೆ ಸಣ್ಣ ಪ್ರಯತ್ನ ಮಾಡಿದೆ. ಅದಕ್ಕೆ ಬೇರೆಯವರ ಮುಂದೆ ಇಷ್ಟು ಗಲಾಟೆ ಏಕೆ ಮಾಡುತ್ತೀಯ?' ಎಂದನು ಕೃಷ್ಣ. ನಂತರ ಪ್ರೇಮ್ ಕಡೆ ತಿರುಗಿ 'ನನ್ನ ಹೆಸರು ಕೃಷ್ಣ. ಪೊಲೀಸ್ ಡಿಪಾರ್ಟ್‌ಮೆಂಟ್' ಎಂದನು.

'ನನ್ನ ಹೆಸರು ಪ್ರೇಮ್‌ಜಿತ್' ಎಂದನು ಆ ಯುವಕ.

ದಂಪತಿಗಳು ಹೋದ ಮೇಲೆ ಅವನು ಮರಳಿ ಸ್ನೇಹಿತನ ಬಳಿಗೆ ಹೋದನು.

'ಏನು ನಡೀತು ಗುರೂ? ಯಾರು ಕೂಗಿಕೊಂಡಿದ್ದು?'

'ಅವಳ ಗಂಡ ಒಬ್ಬ ಫೂಲ್. ಹೆಂಡತೀನ ನೀರಿಗೆ ತಳ್ಳಿ ನಿಂತು ನೋಡುವ ಮುಠ್ಠಾಳ. ಅವನ ಹೆಂಡತಿ ಬಹಳ ಸುಂದರಿ. ಬಾಡಿ ಸ್ಪಾಂಜ್, ಸೊಂಟ ವಾಹ್... ಇನ್ನು ಅದಂತೂ....'

'ಯಾವುದು?'

'ಡೀಟೇಲ್ಸ್ ಕೇಳಬೇಡ'

ನಂತರ ತನ್ನಲ್ಲೇ ಗೊಣಗಿಕೊಂಡನು ಪ್ರೇಮ್.

'ಏನಾದರೂ ಸರಿ, ಅವಳ ಜೊತೆ ಫ್ರೆಂಡ್‌ಶಿಪ್ ಮಾಡಿಕೊಳ್ಳಬೇಕು... ಆಮೇಲೆ....'

ಅವನ ಮಾತು ಪೂರ್ತಿಯಾಗುವ ಮೊದಲೇ ಸರ್ವೇಶ್ವರ್ 'ನನಗೆ ಕೂಡಾ' ಎಂದಾಗ ಪ್ರೇಮ್ ಸಿಟ್ಟಾಗಿದ್ದನ್ನು ಕಂಡು 'ಪಾರ್ಟಿ ಗುರು' ಎಂದು ಮಾತು ಬದಲಾಯಿಸಿದನು.

'ಮಾಮೂಲು ಎಣ್ಣೆ ಪಾರ್ಟಿಯಲ್ಲ, ಅದಕ್ಕಿಂತ ದೊಡ್ಡ ಪಾರ್ಟಿ ಕೊಡ್ತೇನೆ. ಒಂದು ತಿಂಗಳಲ್ಲಿ ಮುಗಿಸ್ತೀನಿ ನೋಡ್ತಿರು'

'ಒಂದು ತಿಂಗಳಲ್ಲಾ?'

'ಹೌದು, ನನ್ನ ಹೆಸರೇನು? ಪ್ರೇಮ್‌ಜಿತ್. ಅಂದರೆ ಪ್ರೇಮವನ್ನು ಗೆಲ್ಲುವನು... ಸೋಲುವ ಪ್ರಯೇಮಯವೇ ಇಲ್ಲ. ಇದೇ ನನ್ನ ಚಾಲೆಂಜ್. ಬೇಕಿದ್ದರೆ ಪಂದ್ಯ ಕಟ್ಟು'

'ಹತ್ತು ಸಾವಿರ' ಎಂದನು ಸರ್ವೇಶ್ವರ್. ಅವನ ಲೆಕ್ಕಾಚಾರ ಅವನದು. ಸ್ನೇಹಿತ ಅವಳನ್ನು ಒಲಿಸಿಕೊಂಡರೆ ಫೋಟೋ ತೆಗೆದೋ, ವಿಡಿಯೋ ತೆಗೆದೋ ಗಂಡನಿಗೆ ತೋರಿಸುತ್ತೇನೆಂದು ಬ್ಲಾಕ್‌ಮೇಲ್ ಮಾಡಿ ತಾನೂ ಅವಳನ್ನು ಅನುಭವಿಸಬಹುದು. ಪಾಕೆಟ್ ಮನಿಗಾಗಿ ದುಡ್ಡು ಕೂಡಾ ಪೀಕಿಸಬಹುದು. ಹಿಂದೆ ಇಬ್ಬರೂ ಸೇರಿ ಎಷ್ಟೋ ಸಾರಿ ಹೀಗೆ ಮಾಡಿದ್ದರು. ಅದಕ್ಕಾಗಿಯೇ ಅವನನ್ನು ಇನ್ನಷ್ಟು ಕೆರಳಿಸಲು 'ಹತ್ತು ಸಾವಿರ'ದ ಪಂದ್ಯ ಕಟ್ಟಿದನು.

ಯಾವುದೋ ಹಾಡನ್ನು ಸಣ್ಣದಾಗಿ ಹಾಡುತ್ತ ಕಿಚನ್‌ನಲ್ಲಿ ಅಡಿಗೆ ಮಾಡುತ್ತಿದ್ದಳು ಕಲ್ಯಾಣಿ, ಸಣ್ಣದಾಗಿ ಹಾಡಿಕೊಳ್ಳುತ್ತ ಕೆಲಸ ಮಾಡುವುದು ಅವಳ ರಿಲ್ಯಾಕ್ಸಿಂಗ್ ಟೆಕ್ನಿಕ್‌ಗಳಲ್ಲಿ ಒಂದು. ಶ್ರೀರಾಗವನ್ನು ಸ್ವಲ್ಪ ಬದಲಾವಣೆ ಮಾಡಿ ಮಧ್ಯಮಾವಧಿಯಲ್ಲಿ ಹಾಡುತ್ತಿದ್ದಳು. ಸಣ್ಣ ಮಕ್ಕಳ ಕಂಪ್ಯೂಟರ್ ಗೇಮ್ಸ್‌ನಲ್ಲಿ ಎಷ್ಟು ಉತ್ತೇಜನ ಪಡೆಯುತ್ತಾರೋ, ಒಂದು ಸಾರಿ ಅಭ್ಯಾಸವಾದರೆ ರಾಗಗಳನ್ನು ಬದಲಾವಣೆ ಮಾಡಿ ಹಾಡುವುದರಲ್ಲೂ ಅಷ್ಟೇ 'ಕಿಕ್' ಸಿಗುತ್ತದೆ.

'ಪಂಚಭೂತಗಳೆಂಬ ಬಣ್ಣ ಬಣ್ಣದ ನೂಲುಗಳನ್ನು ಚಂಚಲತೆ ಎಂಬ ಗಂಜಿಯಲ್ಲಿ ಮುಳುಗಿಸಿ ತಯಾರಿಸಿದ ಸೀರೆಗಳನ್ನು ಮುಖ ಎಂಬ ಸಂತೆಯಲ್ಲಿ ಮಾರಾಟ ಮಾಡುವ ವ್ಯಾಪಾರಿ....' ಎನ್ನುತ್ತ ವೆಂಕಟೇಶ್ವರನ ಸಂಕೀರ್ತನೆ ಮಾಡಿದ ಅನ್ನಮಯ್ಯನ ಹಾಡನ್ನು ತನ್ನ ಪ್ರಸ್ತುತ ಪರಿಸ್ಥಿತಿಗೆ ಅನ್ವಯಿಸಿಕೊಂಡಳು.

ತಾನು ತೆರೆದುಕೊಂಡ ನಿರ್ಧಾರವನ್ನು (ಮದುವೆ ಬಗ್ಗೆ) ಅಪ್ಪ ಹೇಗೆ ಸ್ವೀಕರಿಸುತ್ತಾರೆ ಎಂದು ಯೋಚಿಸುತ್ತಿದ್ದಳು.

ಅವಳು ಆ ಯೋಚನೆಯಲ್ಲಿದ್ದಾಗ 'ಕಲ್ಯಾಣೀ... ಕಲ್ಯಾಣಿ' ಎಂದು ಕೂಗುತ್ತ ಒಳಗೆ ಬಂದನು ಕೃಷ್ಣ.

'ಯಾಕಷ್ಟು ಗಟ್ಟಿಯಾಗಿ ಕೂಗುತ್ತೀಯ? ಇಲ್ಲೇ ಇದ್ದೇನೆ'

ಅವಳ ಮಾತಿಗೆ ಗಮನ ಕೊಡದೆ ಎಕ್ಸೈಟಿಂಗ್ ಆಗಿ 'ನಿಮ್ಮ ತಂದೆ ವಿಷಯ ಸ್ವಲ್ಪ ತಿಳೀತು' ಎಂದನು.

ಒಮ್ಮಲೇ ಅಮೃತಾಭಿಷೇಕವಾದ ಅನುಭೂತಿಯಿಂದ 'ನಿಜನಾ? ಎಲ್ಲಿ? ಯಾವಾಗ?' ಎಂದು ಕೇಳಿದಳು.

'ನೆನ್ನೆ ಸಿಕ್ಕಿಬಿದ್ದ ಉಗ್ರವಾದಿ ಹೇಳಿದ.... ಅವರನ್ನು ಇಲ್ಲಿಂದ ಕಾಶ್ಮೀರಕ್ಕೆ ಸಾಗಿಸಿಲ್ಲ, ಇಲ್ಲಿಯೇ ಎಲ್ಲೋ ಇಟ್ಟಿದ್ದಾರೆ.'

ಅವನ ಕೈಯನ್ನು ಹಿಡಿದು 'ನಂಗೆ ಬಹಳಾ ಸಂತೋಷವಾಗಿದೆ ಕೃಷ್ಣಾ'. ಎಂದು ಹೇಳುತ್ತಿದ್ದಾಗ ಬಾಗಿಲಿನ ಬಳಿ ಸಣ್ಣದಾಗಿ ಕೆಮ್ಮಿದ ಸದ್ದು ಕೇಳಿಸಿತು. ಒಬ್ಬರೂ ಆ ಕಡೆ ತಿರುಗಿದರು.

ಪ್ರೇಮ್‌ಜಿತ್ ಅಲ್ಲಿ ನಿಂತಿದ್ದನು. ಕಲ್ಯಾಣಿ ಶಾಕ್‌ನಿಂದ ಅವನನ್ನು ನೋಡಿದಳು.

ಪ್ರೇಮ್ ಒಳಗೆ ಬರುತ್ತ 'ಸ್ವಲ್ಪ ಕುಡಿಯುವ ನೀರು ಕೊಡ್ತೀರಾ?' ಎಂದು ಕೇಳಿದನು.

ಅವಳು ಕೋಪದಿಂದ 'ನೀರಿನ ಬಾಟಲ್ ಮಾರ್ಕೆಟ್‌ನಲ್ಲಿ ಸಿಗುತ್ತದೆ. ಹೀಗೆ ಡೈರೆಕ್ಟಾಗಿ ಮನೆಯೊಳಗೆ ಬಂದು ಕೇಳ್ತೀರಲ್ಲ' ಎಂದಳು.

'ಕಲ್ಯಾಣಿ ಪ್ಲೀಸ್... ಹೇಳುವುದು ಮರೆತಿದ್ದೆ. ಈವತ್ತೇ ಇವನು ನಮ್ಮ ಪಕ್ಕದ ಪೋರ್ಷನ್‌ಗೆ ಬಾಡಿಗೆಗೆ ಬಂದಿದ್ದಾನೆ. ವಾಟರ್ ಬಾಟಲ್ ಕೊಡು' ಎಂದನು ಕೃಷ್ಣ.

ಅವಳು ಒಳಗಿನಿಂದ ನೀರಿನ ಬಾಟಲ್ ತಲುಪುವುದರೊಳಗೆ ಪ್ರೇಮ್ ಇರಲಿಲ್ಲ.

'ಯಾವುದೋ ಫೋನ್ ಬಂತು, ಹೊರಟು ಹೋದ.... ತೆಗೆದುಕೊಂಡು ಹೋಗಿ ಕೊಡು' ಎಂದನು ಕೃಷ್ಣ.

'ಅವನ ಪೋರ್ಷನ್‌ಗೆ ನಾನೇಕೆ ಹೋಗಲಿ, ನೀನೇ ಕೊಟ್ಟು ಬಾ' ಎಂದಳು. ಅಷ್ಟರಲ್ಲಿ ಕೃಷ್ಣ ಜಿಮ್ ಪ್ರಾರಂಭಿಸಿದ್ದರಿಂದ ನಿರಾಸಕ್ತಿಯಿಂದ ಹೊರಟಳು.

ಬಾಟಲ್ ತೆಗೆದುಕೊಳ್ಳುವಾಗ ಅವನು ತನ್ನ ಕೈಬೆರಳುಗಳನ್ನು ತಗುಲಿಸಿದ್ದನ್ನು ಕಲ್ಯಾಣಿ ಗಮನಿಸಿದಳು.

ಕೋಣೆಯ ಒಂದು ಮೂಲೆಯಲ್ಲಿದ್ದ ಸ್ಟೂಲನ್ನು ಕಂಡು 'ಅದು ನಮ್ಮದು, ತೆಗೆದುಕೊಂಡು ಹೋಗುತ್ತೇನೆ' ಎಂದಳು. ಅದರ ಮೇಲೆ ಸಿಗರೇಟ್ ತುಂಡುಗಳು, ಆ್ಯಷ್ ಟ್ರೇ ಅಸಹ್ಯವಾಗಿ ಕಂಡವು. ಸ್ಟೂಲನ್ನು ಎತ್ತಿಕೊಳ್ಳಲು ಬಾಗಿದಾಗ 'ಬ್ಯಾಕ್ ಚೆನ್ನಾಗಿದೆ' ಎಂದು ಅವನು ಅಸ್ಪಷ್ಟವಾಗಿ ಹೇಳಿದ್ದು ಕೇಳಿಸಿತು. ಅವಳು ಸ್ಟೂಲ್ ಎತ್ತಿಕೊಂಡು ಕೋಪದಿಂದ 'ಏನಂದೆ?' ಎಂದಳು.

**(ಸಶೇಷ)**